ಶ್ರೀ ಕೆ. ನಾಗಪ್ಪ ಆಳ್ವ.—ಹೌದು.

ಶ್ರೀ ಎಸ್. ಗೋಪಾಲ ಗೌಡ.—ಅವರನ್ನು ಖಾಯಂ ಮಾಡುವುದಕ್ಕೇನಾದರೂ ಸರ್ಕಾರ ಡೆವರು ಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ್ಗೆ ಕೆಲವು ದಿನಗಳ ಹಿಂದೆ 160 ಹುದ್ದೆಗಳನ್ನು ನಾವು ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ಅಡ್ವರ್ಟೈಜ್ ಮಾಡಿದ್ದೇವೆ. ಇನ್ನು ಒಂದು ತಿಂಗಳೊಳಗಾಗಿ ಬಾಕಿ ಹುದ್ದೆಗಳನ್ನು ಅಡ್ವರ್ಟೈಜ್ ಮಾಡಿ ನೇಮಕಗಳನ್ನು ಮಾಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನುಮಾರು ಐದಾರು ವರ್ಷಗಳಿಂದಲೂ 227 ಜನ ಡಾಕ್ಟರು ಗಳಿಗೆ ಕನ್‌ಫರ್ಮ್ ಮಾಡದೆ ಮತ್ತು ರೆಕ್ರೂಟ್ ಮಾಡದೇ ಇರುವುದರಿಂದ ಈಗ ರೆಕ್ರೂಟ್ ಮಾಡು ತ್ತೇವೆಂದು ತಿಳಿಸಿರುವುದರಿಂದ ಆರೇಳು ವರ್ಷಗಳಿಂದಲೂ ಇರತಕ್ಕ ಡಾಕ್ಟರುಗಳ ಸೀನಿಯಾರಿಟಿ ಮತ್ತು ನಂಬಳ ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ರೆಕ್ರೂಟ್ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮುಖಾಂತರ ಹುದ್ದೆಗಳಿಗೆ ನೇಮಕ ವಾದನಂತರ ಪ್ರತಿಯೊಂದು ವಿಚಾರವಾಡಿ ಅವರಿಗೆ ಎಲ್ಲಾ ವಿಧದಲ್ಲೂ ಅಂದರೆ ಅವರ ಸೀನಿಯಾರಿಟಿ, ಇಂಕ್ರಿಮೆಂಟ್ ಮತ್ತು ನಂಬಳದ ಬಗ್ಗೆ ವಿಚಾರ ಮಾಡಿ ಸರಿಪಡಿಸುತ್ತೇವೆ.

ಶ್ರೀ ಎಸ್. ಶಿವಪ್ಪ.—359 ಖಾಲಿ ಹುದ್ದೆಗಳ ಪೈಕಿ 227 ಜನರನ್ನು ಹಂಗಾಮಿಯಾಗಿ ನೇಮಕ ಮಾಡಿರುವಾಗ ಅವರನ್ನು ಖಾಯಂ ಮಾಡಿದ್ದರೆ ಬೇಕಾದಷ್ಟು ಸೌಲಭ್ಯಗಳು ದೊರೆಯುತ್ತಿ ದ್ದವು. ಇನ್ನೂ ಅವರನ್ನು ಹಂಗಾಮಿಯಾಗಿಯೇ ಇಟ್ಟಿರುವುದರಿಂದ ಅವರನ್ನು ಖಾಯಂ ಮಾಡುವ ನಂದರ್ಭದಲ್ಲಿ ಅವರಿಗೆ ಎಲ್ಲಾ ಸೌಕರ್ಯಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಬೇಕಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Plan and Estimate proposed by the Executive Engineer, Mandya, to bring under wet cultivation about ten thousand acres of land.

*Q.—460. Sri S. M. KRISHNA (Maddur).—

Will the Government be pleased to state:—

(*a*) whether any plan and estimates have been proposed by the Executive Engineer, Mandya to bring under wet cultivation about ten thousand acres and stabilising water supply to about twenty-five thousand acres in Mandya District.

(*b*) What is the amount that is estimated to be spent on that programme;

(*c*) whether the State Government have approved the programme and if the answer is in the nagative, whether they would attempt to obtain central Government assistance in view of the package plan in the District?

A.— Sri S. NIJALINGAPPA (Chief Minister).—

(*a*) Yes.

(*b*) About Rs. 130.85 lakhs.

(*c*) No. This will be considered on receipt of the estimates from the Chief Engineer (Gl.) Bangalore.

ಶ್ರೀ ಎಸ್. ಎಂ. ಕೃಷ್ಣ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ನದರೀ ವಿಚಾರವನ್ನು ಚೀಫ್ ಇಂಜಿನಿಯರಿಗೆ ರೆಫರ್ ಮಾಡಿದೆ ಎಂದು ಆಪ್ಷನ್ ಕೊಟ್ಟಿದ್ದೀರಿ. ಎಷ್ಟು ದಿವನಗಳೊಳಗೆ ಅವರಿಂದ ವರದಿಯನ್ನು ನಿರೀಕ್ಷಣೆ ಮಾಡುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಅವು ಟೆಕ್ನಿಕಲ್ ಮ್ಯಾಟರ್ಸ್. ಇಷ್ಟೇ ದಿವಸಗಳೊಳಗೆ ವರದಿ ಬರುತ್ತದೆ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ವರದಿಯನ್ನು ಕಳುಹಿಸ ಬೇಕೆಂದು ತಿಳಿಸಿದೆ.

ಶ್ರೀ ಎಸ್. ಎಂ. ಕೃಷ್ಣ.—ಬೋಳಾರೆ ಯೋಜನೆಯನ್ನು ಕೃಷ್ಣರಾಜಸಾಗರದಿಂದ ಸೇರಿಸಿ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಮಾಡಿಸಿಕೊಡುತ್ತೇವೆನ್ನುವ ಉತ್ತೇಜಕವಾದ ಮಾತು ಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಹಿಂದೆಯೇ ಆಡಿದ್ದರು. ಅದನ್ನು ಈಗ ನಡೆಸಿಕೊಡುವು ದಕ್ಕೆ ಸಾಧ್ಯವೇ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಸುಮಾರು ಒಂದು ಲಕ್ಷದ ಇಪ್ಪತ್ತು ಸಾವಿರ ಎಕರೆಗಳಷ್ಟು ಜಮೀನಿಗೆ ಅನುಕೂಲವಾಗುವ ಒಂದು ಒಳ್ಳೆಯ ಯೋಜನೆ. ಇದರಲ್ಲಿ ಬೋಳಾರೆ ಯೋಜನೆಯೂ ಸಹ ಸೇರಿದೆ. ಇದೆಲ್ಲವನ್ನೂ ಜಾಗ್ರತೆಯಾಗಿ ವಿಚಾರ ಮಾಡಿ ಕಾರ್ಯಗತ ಮಾಡಬೇಕೆಂದಿದ್ದೇವೆ.

Government Waste Land given for the cultivation to tenants in Khanapur and Belgaum Taluks.

*Q.—462. **Sri L. B. BIRJE** (Khanapur).—

Will the Government be pleased to state :—

(*a*) the number of acres of Government waste lands that are given for the cultivation to tenants in Khanapur and Belgaum Taluks on the basis of one year Kabuliyat;

(*b*) in what villages and in each how many acres and to how many persons in each village the said lands are given for cultivation;

(*c*) whether there is any rule which specifies the number of years after which a tenant is to be given a particular Government waste land for permanent cultivation which he is cultivating on the condition of one year Kabuliyat and if so the period so specified;

(*d*) if such rule is there, while fixing the value of a particular piece of land, which a tenant is cultivating how many times of the revenue assessment it is fixed;

(*e*) the maximum acres of Government waste land that can be given to a tenant on the basis of permanent cultivation?

A.—**Sri M. V. KRISHNAPPA** (Minister for Revenue).—

(*a*) (*i*) Khanapur Taluk—6,950-21 acres.

(*ii*) Belgaum Taluk—2,119-37 acres.

(*b*) *Vide* Statements 'A' and 'B' given below.

(*c*) Lands will be confirmed in favour of the lessees who have fulfilled the terms of grant and are cultivating the lands personally for over six years and are insufficient holders. In all other cases the lease will be terminated from the next due date.

(*d*) The occupancy price payable shall ordinarily be not less than ten and not more than twenty times the assessment of the land.

(*e*) Two acres of wet land with assured irrigation facilities from tanks or channels or four acres of other kinds of wet land or ten acres of dry land.